# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 499 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ |
| ಉತ್ತರಿಸುವ ದಿನಾಂಕ | : | 13.12.2018 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಅಂಗವಿಕಲರ ಅಧಿನಿಯಮದ ಕಛೇರಿಯಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಿಸಿದಂತೆ 371ಜೆ ರಂತೆ ಅಧಿಸೂಚನೆ ಹೊರಡಿಸುವುದು ಯಾವಾಗ;</td><td>ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಹೈದ್ರಾಬಾದ್-ಕರ್ನಾಟಕಕ್ಕೆ ಸಂಬಂಧಿಸಿದಂತೆ 371(ಜೆ) ರನ್ವಯ ದಿನಾಂಕ:15.05.2014ರಂದು ಆದೇಶ ಹೊರಡಿಸಲಾಗಿದೆ.<br>ಅಂಗವಿಕಲರ ಅಧಿನಿಯಮ ಕಛೇರಿಯಲ್ಲಿ ಹೈದ್ರಾಬಾದ್-ಕರ್ನಾಟಕಕ್ಕೆ ಸಂಬಂಧಿಸಿದಂತೆ 371(ಜೆ) ರನ್ವಯ ದಿನಾಂಕ:03.03.2017ರಂದು ಅಧಿಸೂಚನೆ ಹೊರಡಿಸಲಾಗಿದೆ.</td></tr>
<tr><td>ಆ</td><td>ರಾಜ್ಯ ವೃಂದದಲ್ಲಿ ಡಿ.ಸಿ.ಬಿ.ಎ ದರ್ಜೆಯಲ್ಲಿರುವ ಹುದ್ದೆಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನಿಗದಿಗೊಳಿಸಿದ ಹುದ್ದೆಗಳ ಸಂಖ್ಯೆ ಎಷ್ಟು;</td><td>ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಅನುಚ್ಛೇದ 371ಜೆ ರಡಿಯಲ್ಲಿ ಒಟ್ಟು 78 ಹುದ್ದೆಗಳನ್ನು ಗುರುತಿಸಲಾಗಿದೆ. ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ. ಸಂ</th><th>ಸಮೂಹ</th><th>ರಾಜ್ಯವ್ಯಾಪಿ ವೃಂದದಲ್ಲಿ ಗುರುತಿಸಲಾದ ಹುದ್ದೆಗಳ ಸಂಖ್ಯೆ</th><th>ಪ್ರಾದೇಶಿಕ ಸ್ಥಳೀಯ ವೃಂದದಲ್ಲಿ ಗುರುತಿಸಲಾದ ಹುದ್ದೆಗಳ ಸಂಖ್ಯೆ</th><th>ಒಟ್ಟು</th></tr>
<tr><td>1</td><td>ಸಮೂಹ-ಎ</td><td>0</td><td>0</td><td>0</td></tr>
<tr><td>2</td><td>ಸಮೂಹ-ಬಿ</td><td>0</td><td>9</td><td>9</td></tr>
<tr><td>3</td><td>ಸಮೂಹ-ಸಿ</td><td>3</td><td>39</td><td>42</td></tr>
<tr><td>4</td><td>ಸಮೂಹ-ಡಿ</td><td>1</td><td>26</td><td>27</td></tr>
<tr><td></td><td>ಒಟ್ಟು</td><td>4</td><td>74</td><td>78</td></tr>
</table></td></tr>
</table>

ಅಂಗವಿಕಲ ಅಧಿನಿಯಮ ಕಛೇರಿಯು ಬೆಂಗಳೂರಿನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಅನುಚ್ಛೇದ 371ಜೆ ರಡಿಯಲ್ಲಿ ಒಟ್ಟು 03 ಹುದ್ದೆಗಳನ್ನು ಗುರುತಿಸಲಾಗಿದೆ. ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಸಮೂಹ | ರಾಜ್ಯವ್ಯಾಪಿ ವೃಂದದಲ್ಲಿ ಗುರುತಿಸಲಾದ ಹುದ್ದೆಗಳ ಸಂಖ್ಯೆ | ಪ್ರಾದೇಶಿಕ ಸ್ಥಳೀಯ ವೃಂದದಲ್ಲಿ ಗುರುತಿಸಲಾದ ಹುದ್ದೆಗಳ ಸಂಖ್ಯೆ | ಒಟ್ಟು |
|---|---|---|---|---|
| 1 | ಸಮೂಹ-ಎ | 0 | 0 | 0 |
| 2 | ಸಮೂಹ-ಬಿ | 0 | 0 | 0 |
| 3 | ಸಮೂಹ-ಸಿ | 2 | 0 | 2 |
| 4 | ಸಮೂಹ-ಡಿ | 1 | 0 | 1 |
| | ಒಟ್ಟು | 3 | 0 | 3 |

| | | |
|---|---|---|
| ಇ | ಅಂಗವಿಕಲರ ಅಧಿನಿಯಮ 2016ರ ಅನ್ವಯ 21 ವಿಧದ ಅಂಗವಿಕಲತೆ ವಿಂಗಡಣೆಯಾಗಿದ್ದು, ತಾಲ್ಲೂಕು ಮಟ್ಟದಲ್ಲಿ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ ಪ್ರಾರಂಭಿಸುವುದು ಯಾವಾಗ? | ತಾಲ್ಲೂಕು ಮಟ್ಟದಲ್ಲಿ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ |
| ಈ | ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಸಿ.ಡಿ.ಪಿ.ಓ ರವರು ಮುತ್ತಗಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯಲ್ಲಿ ಅವ್ಯವಹಾರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಈ ಬಗ್ಗೆ ತನಿಖೆಯಾಗಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಉ | ಬೀದರ್ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಭವನಕ್ಕಾಗಿ ಎರಡು ಎಕರೆ ಜಮೀನು ಮಂಜೂರಾಗಿದ್ದು ಆ ಜಮೀನಿನಲ್ಲಿ ಭವನ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ? | ಬೀದರ್ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಭವನಕ್ಕಾಗಿ ಒಂದು ಎಕರೆ ಜಮೀನು ಮಂಜೂರು ಮಾಡಲಾಗಿದ್ದು, ಸದರಿ ಜಮೀನಿನಲ್ಲಿ ಭವನ ನಿರ್ಮಾಣ ಮಾಡಲು ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು. |

ಸಂಖ್ಯೆ: ಮಮಇ 370 ಎಸ್‌ಜಿಡಿ 2018

(ಡಾ: ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು.